**3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು, ಬೆಳಗಾವಿ**

**ಇವರ ನ್ಯಾಯಾಲಯದಲ್ಲಿ, ಬೆಳಗಾವಿ.**

ಸ್ಪೆಷಲ್ ಕೇಸ ನಂಃ356/2024

ಪಿಡಬ್ಲು :2 ಸಿಡಬ್ಲು :2

| | | |
|---|---|---|
| ಸಾಕ್ಷಿಯ ಹೆಸರು | : | ಶ್ರೀ. ನಾಗನಗೌಡ ಪಾಟೀಲ |
| ತಂದೆಯ ಹೆಸರು | : | ಶ್ರೀ. ಶಂಕರಗೌಡ ಪಾಟೀಲ |
| ವಯಸ್ಸು | : | 33 ವರ್ಷ |
| ಉದ್ಯೋಗ | : | ವರದಿಗಾರರು |
| ವಾಸ್ತವ್ಯ | : | ಕೋಳಗಿ, ಖಾನಾಪೂರ ತಾಲೂಕು |
| ದಿನಾಂಕ | : | 16-03-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು. |

**ಮುಖ್ಯ ವಿಚಾರಣೆ : ವಿಶೇಷ ಸರ್ಕಾರಿ ಅಭಿಯೋಜಕರಿಂದ**

ನಾನು 3 ವರ್ಷಗಳಿಂದ ವರದಿಗಾರನಾಗಿ ಕೆಲಸ ಮಾಡುತ್ತಿದ್ದೇನೆ. 2024 ರಲ್ಲಿ ನಾನು ಕ್ರೈಮ ಫಾಯಿಲ್ ಎಂಬ ಪಾಕ್ಷಿಕ ಪತ್ರಿಕೆಯಲ್ಲಿ ವರದಿಗಾರನಾಗಿ ಕೆಲಸ ಮಾಡುತ್ತಿದ್ದೇನೆ. ಚಾಸಾ:7 ವಿಜಯ ಮಾದರ ಮತ್ತು ಅವರ ಮಗಳು ಚಾಸಾಃ 1 ಹರ್ಷಿತಾ ನನಗೆ ಗೊತ್ತಿರುತ್ತಾರೆ. ಚಾಸಾಃ 8 ದಯಾನಂದ ಅವರೂ ಸಹ ವರದಿಗಾರರಾಗಿದ್ದು, ನನಗೆ ಗೊತ್ತಿರುತ್ತಾರೆ.

2. ಚಾಸಾಃ 7 ರವರು ದಿನಾಂಕಃ 12-12-2023 ರಂದು ನನಗೆ ಪೋನ ಮಾಡಿ, ತಮ್ಮ ಮಗಳು ಚಾಸಾಃ 1 ರವರು ಮನೆಯಲ್ಲಿ ಇಲ್ಲ, ಅವಳು ಕಾಣೆಯಾಗಿದ್ದಾಳೆ ಎಂದು ಹೇಳಿದ್ದರು. ನಾನು ಅವರಿಗೆ ಪೋಲಿಸ ಠಾಣೆಗೆ ಹೋಗಿ ದೂರು ನೀಡುವಂತೆ ಹೇಳಿದ್ದೇನು. ಅವರು ಆ ಬಗ್ಗೆ ದೂರು ಕೊಟ್ಟಿದ್ದರು. ದೂರು ಕೊಟ್ಟ ಮರುದಿನ ತಮ್ಮ ಮಗಳು ಮನೆಗೆ ಬಂದಿದ್ದಾಳೆಂದು ಪುನಃ ನನಗೆ ಪೋನ ಮಾಡಿ ತಿಳಿಸಿದ್ದರು.

3. ದಿನಾಂಕಃ 12–03–2024 ರಂದು ಪೋಲಿಸರು ನನ್ನನ್ನು ಪೀರಣವಾಡಿಯ ಸರ್ಕಾರಿ ಶಾಲೆ ಮುಂಭಾಗದಲ್ಲಿರುವ, ಆಸ್ಪತ್ರೆಯ ಮುಂಭಾಗದಲ್ಲಿ ಗೋವಾ – ಬೆಳಗಾವಿ ರಸ್ತೆಗೆ ಬರುವಂತೆ ಪೋಲಿಸರು ಕರೆದಿದ್ದರು. ನಾನು ಅಲ್ಲಿಗೆ ಹೋದಾಗ ಸ್ಥಳದಲ್ಲಿ ಚಾಸಾಃ 1 ಹಾಜರು ಇದ್ದು, ಸ್ಥಳ ತೋರಿಸಿ, ಅಲ್ಲಿಂದ ಆರೋಪಿ ಮೋಟರಬೈಕನಲ್ಲಿ ಆಕೆಯನ್ನು ಪಾರ್ಲೆ ಗ್ರಾಮಕ್ಕೆ ಕರೆದುಕೊಂಡ ಹೋದ ಸ್ಥಳ ಎಂದು ತೋರಿಸಿದನು. ಪೋಲಿಸರು ಆ ಸ್ಥಳದಲ್ಲಿ ಮಧ್ಯಾಹ್ನ 02:30 ಗಂಟೆಗೆ ಪಂಚನಾಮೆ ಮಾಡಿರುತ್ತಾರೆ.

4. ಅಲ್ಲಿಂದ ಪೋಲಿಸರು ನನ್ನನ್ನು ಮಹಾರಾಷ್ಟ್ರದ ಕೊಲ್ಲಾಪೂರ ಜಿಲ್ಲೆಯ ಚಂದಗಡ ತಾಲೂಕಿನ ಪಾರ್ಲೆ ಗ್ರಾಮದಲ್ಲಿರುವ ಆರೋಪಿಯ ಚಿಕ್ಕಮ್ಮನ ಮನೆಗೆ ಚಾಸಾಃ1 ರವರಿಗೆ ಕರೆದುಕೊಂಡು ಹೋಗಿದ ಸ್ಥಳ ತೋರಿಸಿ, ಅಲ್ಲಿ ಆರೋಪಿ ಆಕೆಯನ್ನು ಎರಡು ದಿನ ಇರಿಸಿಕೊಂಡಿದ್ದನು ಎಂದು ಹೇಳಿದಳು. ಆಗ ಸಮಯ ಸಂಜೆ 04:00 ರಿಂದ 04:30 ಗಂಟೆ ಆಗಿತ್ತು. ಪೋಲೀಸರು ಅಲ್ಲಿ ಪಂಚನಾಮೆ ಮಾಡಿದರು. ಅಲ್ಲಿಂದ ಪುನಃ ಚಾಸಾಃ1 ರವರು ಪೋಲಿಸರನ್ನು ಮತ್ತು ನಮ್ಮನ್ನು ಬೆಳಗಾವಿಯ ಕೇಂದ್ರ ಬಸ್ ನಿಲ್ದಾಣಕ್ಕೆ ಕರೆದುಕೊಂಡು ಬಂದು ಸ್ಥಳ ತೋರಿಸಿ, ಆರೋಪಿ ಆಕೆಯನ್ನು ಪಾರ್ಲೆ ಗ್ರಾಮದಿಂದ ಬೈಕ್ ಮೇಲೆ ತಂದು ಬಿಟ್ಟನು ಎಂದು ಸ್ಥಳ ತೋರಿಸಿದರು. ಪೋಲಿಸರು ಆ ಸ್ಥಳದಲ್ಲಿ ಪಂಚನಾಮೆ ಮಾಡಿದರು. ಈ ಮೇಲೆ ಹೇಳಿದ ಮೂರು ಸ್ಥಳಗಳಲ್ಲಿ ಮಾಡಿದ ಪಂಚನಾಮೆಯನ್ನು ಒಂದೇ ದಾಖಲೆಯಲ್ಲಿ ಬರೆದಿದ್ದಾರೆ. ನಾನು ಅದಕ್ಕೆ ಸಹಿ ಮಾಡಿದ್ದೇನೆ. ಪಂಚನಾಮೆಯನ್ನು ಈಗಾಗಲೇ ನಿಪಿ–2 ಎಂದು ಗುರುತಿಸಿದ್ದು, ಅದರಲ್ಲಿರುವ ಸಾಕ್ಷಿಯ ಸಹಿಯನ್ನು ನಿಪಿ–2 (ಬಿ) ಎಂದು ಗುರುತಿಸಲಾಯಿತು.

5. ಪಂಚನಾಮೆ ಮಾಡಿದ ಮೂರು ಸ್ಥಳಗಳಲ್ಲಿ ತೆಗೆಯಲಾದ ಫೋಟೊಗಳನ್ನು ನೋಡಿ ಸಾಕ್ಷಿ ಗುರುತಿಸಿದ್ದಾರೆ. ಅವುಗಳನ್ನು ಈಗಾಗಲೇ ನಿಪಿ–3 ರಿಂದ ನಿಪಿ–8 ಎಂದು ಗುರುತಿಸಲಾಗಿದೆ.

**ಪಾಟೀ ಸವಾಲು:ಆರೋಪಿ ಪರ ಶ್ರೀ. ಎ.ಸಿ.ಕೆ ವಕೀಲರಿಂದ**

ಈ ಹಂತದಲ್ಲಿ ಆರೋಪಿತರ ಪರ ವಕೀಲರು ಪಾಟೀ ಸವಾಲಿಗಾಗಿ ಸಮಯಾವಕಾಶ ಕೋರಿದ್ದು, ಕೋರಿಕೆಯ ಮೇರೆಗೆ ಸಮಯಾವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.

ದಿನಾಂಕ : 04-08-2026 ರಂದು ಸಾಕ್ಷೀದಾರರನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲು:ಆರೋಪಿ ಪರ ಶ್ರೀ. ಎ.ಸಿ.ಕೆ ವಕೀಲರಿಂದ**

6. ದೂರುದಾರರ ತಂದೆಯ ಹೆಸರು ವಿಜಯ ಕುಮಾರ ಮಾದರ. ಸದರಿಯವರು ಪ್ರೆಸ್ ರಿಪೋರ್ಟರ್ ಎನ್ನುವುದು ಸರಿ. ನಾನು ಸಹ ಪ್ರೆಸ್ ರಿಪೋರ್ಟರ ಎನ್ನುವುದು ಸರಿ. ಚಾಸಾ-3 ಉಡಚಪ್ಪ ಪಾರ್ವತಮನವರ ಸಹ ಪ್ರೆಸ್ ರಿಪೋರ್ಟರ್ ಎನ್ನುವುದು ಸರಿಯಲ್ಲ. ದೂರುದಾರರ ತಂದೆ ನನಗೆ ಬಹಳ ವರ್ಷಗಳಿಂದ ನನಗೆ ಪರಿಚಯ ಎನ್ನುವುದು ಸರಿ. ಪೋಲಿಸರು ಪಂಚನಾಮೆ ಮೇಲೆ ನನ್ನ ಸಹಿ ಮಾಡಿಸಿಕೊಂಡಿದ್ದಾರೆ. ಪಂಚನಾಮೆ ಮಾಡಲು ಸಾಕ್ಷಿಯಾಗಿ ಬರುವಂತೆ ನನಗೆ ಕರೆದಿದ್ದರು ಆದರೆ ಲಿಖಿತವಾಗಿ ನೋಟಿಸ ನೀಡಿರಲಿಲ್ಲ. ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ದಿನಾಂಕಃ 12-03-2024 ರಂದು ಪೋಲಿಸರು ನನ್ನನ್ನು ಠಾಣೆಗೆ ಕರೆಸಿದ್ದರು. ಮಧ್ಯಾಹ್ನ ಸುಮಾರು 1.00 ಗಂಟೆಗೆ ನಾನು ಪೋಲಿಸ ಠಾಣೆಗೆ ಹೋಗಿದ್ದೇನು. ನಾನು ಪೋಲಿಸ ಠಾಣೆಗೆ ಹೋದಾಗ ಪೋಲಿಸ ಅಧಿಕಾರಿಗಳು ಇದ್ದರು, ದೂರುದಾರರು ಇದ್ದರು. ಚಾಸಾ-7 ವಿಜಯ ಕುಮಾರ ನನಗೆ ಠಾಣೆಗೆ ಬರುವಂತೆ ಕರೆದಿದ್ದರು. ಪಂಚನಾಮೆಯ ಬಗ್ಗೆ ಪೋಲಿಸರು ನನಗೆ ಹೇಳಿದರು. ಬೇರೆಯವರು ನನಗೆ ಏನು ಹೇಳಿರುವುದಿಲ್ಲ.

7. ಠಾಣೆಯಿಂದ ಪಂಚನಾಮೆ ಮಾಡಿದ ಸ್ಥಳಕ್ಕೆ ಸುಮಾರು ಅರ್ಧ ಗಂಟೆಯ ಒಳಗೆ ಹೋಗಿದ್ದೇವು. ಠಾಣೆಯಲ್ಲಿ ನಾನು ಸುಮಾರು ಅರ್ಧ ಗಂಟೆ ಇದ್ದೇನು. ಪಂಚನಾಮೆ ಮಾಡಲು ನಾನು ಮತ್ತು ಪೋಲಿಸರು ಹೋಗಿದ್ದೇವು. ಪೋಲಿಸರು ಪಂಚನಾಮೆ ಮಾಡಿದ ಸ್ಥಳಕ್ಕೆ ಕ್ಯಾಮೆರಾ, ಲ್ಯಾಪಟಾಪ ತಂದಿದ್ದರು ಮತ್ತು ಒಬ್ಬ ರೈಟರ ಇದ್ದರು. ಸ್ಥಳದಲ್ಲಿ ನಾವು 2:30 ರ ಸಮಯಕ್ಕೆ ಇದ್ದೇವು. ಸುಮಾರು 30 ರಿಂದ 40 ನಿಮಿಷದ ವರೆಗೆ ಪಂಚನಾಮೆ ಮಾಡಿರುತ್ತಾರೆ. ಪಂಚನಾಮೆಯನ್ನು ಪೋಲಿಸರು ಲ್ಯಾಪಟಾಪನಲ್ಲಿ ಟೈಪ

ಮಾಡಿದರು. ಪೋಲಿಸರು ಏನು ಟೈಪ ಮಾಡಿದರು ಎಂದು ನನಗೆ ಗೊತ್ತಿರುವುದಿಲ್ಲ.

8. ಪಂಚನಾಮೆ ಮಾಡಿದ ಸ್ಥಳದ ಚೆಕಬಂದಿಯನ್ನು ನನಗೆ ಹೇಳಲು ಬರುವುದಿಲ್ಲ. ಚಾಸಾ-7 ವಿಜಯ ಕುಮಾರು ನನಗೆ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡುವ ಸಲುವಾಗಿ ಸುಮ್ಮನೆ ನಾನು ಸ್ಥಳಕ್ಕೆ ಹೋಗಿದ್ದೇನೆ ಎನ್ನುವುದು ಸರಿಯಲ್ಲ. ಪಿರ್ಯಾದುದಾರರ ನನ್ನ ಸಮಕ್ಷಮ ಸ್ಥಳ ತೋರಿಸಿದರು, ಆ ಸ್ಥಳದಲ್ಲಿ ಪೋಲಿಸರು ಪಂಚನಾಮೆ ಮಾಡಿದರು ಮತ್ತು ಪೋಟೊ ತೆಗೆದರು ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

9. ಮೊದಲು ಪಂಚನಾಮೆ ಮಾಡಿದ ಸ್ಥಳದಿಂದ ಎರಡನೆ ಪಂಚನಾಮೆ ಮಾಡಿದ ಸ್ಥಳಕ್ಕೆ ಎಷ್ಟು ದೂರ ಇದೆ ಎನ್ನುವುದು ನನಗೆ ಗೊತ್ತಿರುವುದಿಲ್ಲ. ಸುಮಾರು 60 ರಿಂದ 80 ಕೀಲೊ ಮೀಟರ ದೂರ ಇದೆಯಾ ಎನ್ನುವ ಪ್ರಶ್ನೆಗೆ ಸಾಕ್ಷಿ ಇರಬಹುದು ಎಂದು ಹೇಳಿದ್ದಾರೆ. ಸುಮಾರು 2 ಗಂಟೆಗಳ ಪ್ರಮಾಣ ಆಗುತ್ತದೆ ಎನ್ನುವುದು ಸರಿ.

10. ಎರಡನೇ ಪಂಚನಾಮೆ ಮಾಡಿದ ಸ್ಥಳಕ್ಕೆ ನಾನು ಮತ್ತು ಪೋಲಿಸರು ಹೋಗಿದ್ದೇವು. ನಾನು ಸ್ದಳಕ್ಕೆ ಹೋದಾಗ ಸುಮಾರು 4 ರಿಂದ 4.30 ಗಂಟೆ ಆಗಿತ್ತು ಆದರೆ ನಿಖರವಾಗಿ ಹೇಳಲು ಆಗುವುದಿಲ್ಲ. ನಾನು ಪೋಲಿಸರೊಂದಿಗೆ ಜೀಪಿನಲ್ಲಿ ಹೋಗಿದ್ದೇನು. ಆ ಜೀಪಿನಲ್ಲಿ ಇನ್ನೂ ಜನರು ಇದ್ದರು ಅವರು ಯಾರು ಎಂದು ಈಗ ಹೇಳಲು ಆಗುವುದಿಲ್ಲ. ನೊಂದ ಮಹಿಳೆ ತೋರಿಸಿದ ಆರೋಪಿಯ ಚಿಕ್ಕಮ್ಮನ ಮನೆಗೆ ನಾವು ಹೋಗಿದ್ದೇವು. ಆರೋಪಿಯ ಚಿಕ್ಕಮ್ಮ ಯಾರು ಎಂದು ನನಗೆ ಗೊತ್ತಿರುವುದಿಲ್ಲ ಎಂದು ಸೂಚಿಸುವುದು ಸರಿ. ಸುಮಾರು ಒಂದು ಗಂಟೆಗಳ ವರೆಗೆ ಆ ಸ್ಥಳದಲ್ಲಿ ಇದ್ದೇವು. ಆ ಸ್ಥಳದ ಚೆಕಬಂದಿ ನನಗೆ ಹೇಳಲು ಬರುವುದಿಲ್ಲ ಎನ್ನುವುದು ಸರಿ. ಪೋಲಿಸರು ಏನು ಟೈಪ ಮಾಡಿದರು ಎನ್ನುವುದು ನನಗೆ ಗೊತ್ತಿರುವುದಿಲ್ಲ ಎನ್ನುವುದು ಸರಿ.

11. ಎರಡನೇ ಪಂಚನಾಮೆ ಮಾಡಿದ ಸ್ಥಳದಿಂದ ಪಂಚನಾಮೆ ಸ್ಥಳ ಸುಮಾರು 60–70 ಕಿಲೋ ಮೀಟರ ದೂರ ಇರಬಹುದು. ಅಲ್ಲಿಂದ ಬೆಳಗಾವಿಯ ಕೇಂದ್ರ ನಿಲ್ದಾಣಕ್ಕೆ ಬರಲು ಸುಮಾರು ಒಂದ ಗಂಟೆಗಳ ಸಮಯ ಆಗಿರುತ್ತದೆ. ಬಳಗಾವಿಯ ಕೇಂದ್ರ ಬಸ್ ನಿಲ್ದಾಣಕ್ಕೆ ಸುಮಾರು 6 ರಿಂದ 6.30 ಕ್ಕೆ ಬಂದಿದ್ದೇವು. ಆ ಸಮಯದಲ್ಲಿ ನಾನು, ಪೋಲಿಸರು ಮತ್ತು ನಮ್ಮೊಂದಿಗೆ ನೊಂದ ಮಹಿಳೆ ಇದ್ದಳು. ನೊಂದ ಮಹಿಳೆ ಪೋಲಿಸರೊಂದಿಗೆ ಬಂದಿದ್ದಳು ಆದರೆ ಯಾವ ಗಾಡಿಯಲ್ಲಿದ್ದಳು ನನಗೆ ಗೊತ್ತಿರುವುದಿಲ್ಲ.

12. ಬೆಳಗಾವಿ ಕೇಂದ್ರ ಬಸ್ ನಿಲ್ದಾಣದ ಚೆಕಬಂದಿಯನ್ನು ನನಗೆ ಹೇಳಲು ಆಗುವುದಿಲ್ಲ. ನೊಂದ ಮಹಿಳೆ ತೋರಿಸಿದ ಸ್ಥಳದ ಚೆಕಬಂದಿಯನ್ನು ಸಹ ನನಗೆ ಹೇಳಲು ಆಗುವುದಿಲ್ಲ. ಸ್ಥಳದ ಬಗ್ಗೆ ಪೋಲಿಸರು ಟೈಪ ಮಾಡಿದ್ದಾರೆ. ಪೋಲಿಸರು ಪಂಚನಾಮಾ ಮಾಡಿದ್ದ ಸ್ಥಳದಲ್ಲಿ ನನ್ನ ಸಹಿ ಮಾಡಿಸಿಕೊಂಡಿದ್ದಾರೆ. ದೂರದಾರರು ಆರೋಪಿಯನ್ನು ಇಷ್ಟ ಪಟ್ಟಿದ್ದು, ಆರೋಪಿಯು ಇನಸ್ಟಾಗ್ರಾಮನಲ್ಲಿ 3 ವರ್ಷಗಳಿಂದ ಪ್ರೀತಿ ಮಾಡಿ ಮದುವೆಯಾಗುತ್ತೇನೆ ಎಂದು ನಂಬಿಸಿದ್ದು, ಆ ನಂತರ ನಿಮ್ಮ ಜಾತಿ ಬೇರೆ ನಮ್ಮ ಜಾತಿ ಬೇರೆ ಎಂದು ಹೇಳಿ ಮದುವೆಯಾಗಲು ನಿರಾಕರಿಸಿದ ವಿಚಾರವಾಗಿ ಪಂಚನಾಮಾ ಮಾಡಲಾಗಿದೆ. ಈ ವಿಚಾರವನ್ನು ನೊಂದ ಮಹಿಳೆಗೆ ನಾನು ಪಂಚನಾಮೆ ಪೂರ್ವದಲ್ಲಿ ವಿಚಾರಿಸಿದ್ದಾಗಲೇ ಹೇಳಿದ್ದಾಳೆ. ನಾನು ಪಂಚನಾಮೆಗೆ ಹೋಗುವ ಮೊದಲು ನೊಂದ ಮಹಿಳೆಯನ್ನು ಆಕೆಯ ಮನೆಯ ಮುಂದೆ ವಿಚಾರಿಸಿದಾಗ ನನಗೆ ಹೇಳಿದ್ದಾಳೆ. ನಾನು ನೊಂದ ಮಹಿಳೆಯನ್ನು ನೇರವಾಗಿ ಕೇಳಿದ್ದು ಆಕೆ ನನಗೆ ನೇರವಾಗಿ ಹೇಳಿದ್ದಾಳೆ. ಈ ವಿಚಾರದಲ್ಲಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

13. ನೊಂದ ಮಹಿಳೆಯ ತಂದೆ ನನಗೆ ಪರಿಚಯ ಇರುವುದರಿಂದ ಅವರಿಗೆ ಸಹಾಯ ಮಾಡುವ ಸಲುವಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಸಮಕ್ಷಮ ಪೋಲಿಸರು ಯಾವುದೇ ಪಂಚನಾಮೆ ಮಾಡಿರುವುದಿಲ್ಲ, ಪೋಟೊ

ತೆಗೆದಿರುವುದಿಲ್ಲ ಎನ್ನುವುದು ಸರಿಯಲ್ಲ. ನಾನು ದೂರುದಾರರಿಗೆ ಮತ್ತು ಅವರ ತಂದೆಯವರಿಗೆ ಸಹಾಯ ಮಾಡುವ ಸಲುವಾಗಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

**ಮರು ವಿಚಾರಣೆಃ ಇಲ್ಲ**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯನ್ನು ಗಣಕ ಯಂತ್ರದ ಮುಖಾಂತರ ಪಡೆದುಕೊಳ್ಳಲಾಯಿತು).

ಓ.ಹೇ.ಕೇ.ಸರಿ ಅದೆ.

(ಸವಿತಾ ಕುಮಾರಿ ಎನ್)
3ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಬೆಳಗಾವಿ.